**ಇಲ್ಲ.. ಇಲ್ಲ.. ಇಲ್ಲ.. ನಾನ್ ಸಪೋರ್ಟ್ ಮಾಡಲ್ಲ. ಈ ಭಟ್ರು ಇನ್ನೊಂದು ನಾಲ್ಕು ಪಿಚ್ಚರ್ ಮಾಡ್ಲಿ ಬೇಕಾದ್ರೆ... ನಾನೇ ಸಪೋರ್ಟ್ ಮಾಡ್ತೀನಿ. ಆದ್ರೆ ಎಲೆಕ್ಸನ್ ಎಲ್ಲ ಇವ್ರಿಗೆ ಹೇಳಿದ್ದಲ್ಲ. ಚುನಾವಣೆ ಅಂದ್ರೆ ಹೀರೊಯಿನ್‌ಗಳಿಗೆ ಚಿಕ್ ಚಡ್ಡಿ ಹಾಕಿ ಶೂಟಿಂಗ್ ಮಾಡ್ದಂಗೆ ಅಂದ್ಕಬುಟ್ಟವ್ರೆ... ಇದೆಲ್ಲ ಪೊಲಿಟಿಕ್ಸ್‌ನಲ್ಲಿ ನಡ್ಯಲ್ಲ... ನಾನ್ ಸಪೋರ್ಟ್ ಮಾಡಲ್ಲ...**

**-ಕೆ.ಮಂಜು**

(ಗೌರವ ಡಾಕ್ಟರೇಟ್ ವಿಜೇತ ನಿರ್ಮಾಪಕರು)



ಏನು ಪ್ರಯೋಜನ. ಇದಕ್ಕೆಲ್ಲ ಏನಾದ್ರೂ ಮಾಡಬೇಕು ಅಂತ ರಾತ್ರಿಯೆಲ್ಲ ಯೋಚನೆ ಮಾಡಿದೆ. ಬೆಳಗಿನ ಜಾವದಲ್ಲಿ ಜ್ಞಾನೋದಯ ಆಯ್ತು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅಂತಾರಲ್ಲ... ಹಾಗೆ ಈ ರಾಜಕಾರಣವನ್ನು ರಾಜಕಾರಣದಿಂದಲೇ ಎದುರಿಸಬೇಕು ಅನ್ನಿಸ್ತು.

◆ **ಅಂದ್ರೆ, ಈ ಚುನಾವಣೆಯ ಸ್ಪರ್ಧೆ ನಿಮ್ಮ ಪಾಲಿಗೆ ಸ್ವಾಭಿಮಾನದ ಪ್ರಶ್ನೆ...**

ಹಾಗೇ ಅಂದ್ಕೊಳ್ಳಿ.

◆ **ಅಂದಹಾಗೆ, ಜನ ನಿಮಗೆ ಓಟು ಹಾಕ್ತಾರೆ ಅನ್ನೋ ನಂಬಿಕೆ ಇದೆಯಾ? ಜನ ನಿಮಗೆ ಏಕೆ ಓಟು ಹಾಕಬೇಕು ಅನ್ನೋದಕ್ಕೆ ಒಂದು ಕಾರಣ ಹೇಳಿ.**

ಜನ ನನಗೆ ಯಾಕೆ ಓಟು ಹಾಕಲ್ಲ ಅನ್ನೋದಕ್ಕೆ ನೀವು ಒಂದು ಕಾರಣ ಹೇಳಿ ನೋಡಣ. ನೋಡ್ರಿ, ನೀವೊಂದು ವಿಷ್ಯ ತಿಳ್ಕೋಬೇಕು. ನಾನು ಚುನಾವಣೇಲಿ ಗೆಲ್ತೀನೋ ಸೋಲ್ತೀನೋ ಅದು ಜನರಿಗೆ ಬಿಟ್ಟಿದ್ದು. ಒಳ್ಳೆಯದು ಕೆಟ್ಟದ್ದರ ಆಯ್ಕೆ ಮತದಾರರಿಗೆ ಸಂಬಂಧಿಸಿದ್ದು. ನನ್ನ ಉದ್ದೇಶ ಇಷ್ಟೇ, ಜನರಿಗೆ ಒಳ್ಳೆಯ ಆಯ್ಕೆಯ ಅವಕಾಶಗಳೂ ಇರಬೇಕು. ನಮಗೊಬ್ಬ ಸಮರ್ಥ ಪ್ರತಿನಿಧಿ ಬೇಕು ಎಂದು ಬಯಸೋ ಮತದಾರಪ್ರಭುಗಳಿಗೆ ನಾನು ಒಳ್ಳೆಯ ಆಯ್ಕೆ ಅಂತಷ್ಟೇ ಹೇಳಬಲ್ಲೆ. ನಿಮಗೆ ಹಾಗೆ ಅನ್ನಿಸೊಲ್ಲವಾ? ಮಾತಾಡ್ರೀ... ಹೂಂ ಅನ್ನಿ...

◆ **ನಿಮ್ಮ ಹಾಗೆಯೇ ಶಿವರಾಮ ಕಾರಂತರು ಕಾರವಾರದಲ್ಲಿ ಎಲೆಕ್ಷನ್‌ಗೆ ನಿಂತಿದ್ದರು....**

ಅವರು ಖಾರಂತರು... ನಾವು ಭಟ್ರು... ನಮ್ಮದು ಬೇರೆಯೇ ಲೆಕ್ಕ. ನಾವು ಇತಿಹಾಸದಿಂದ ಪಾಠ ಕಲಿತಿರುವ ಜನ.

◆ **ಯಾವ ಕ್ಷೇತ್ರದಿಂದ ಚುನಾವಣೆಗೆ ನಿಂತ್ಕೊಳ್ತಿದ್ದೀರಿ? ಯಾವ ಪಕ್ಷದಿಂದ ಟಿಕೆಟ್ ನಿರೀಕ್ಷಿಸ್ತಾ ಇದ್ದೀರಿ?**

ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸೋದು ಗ್ಯಾರಂಟಿ. ಇನ್ನು ಪಕ್ಷದ ವಿಷಯ ಕೇಳಿದ್ರಿ... ನಿಮಗೆ ಇಷ್ಟೊತ್ತಿನವರೆಗೆ ನಾನು ಹೇಳಿದ್ದೇ ಅರ್ಥ ಆಗಿಲ್ಲ ಅನ್ನಸ್ತೆ... ಯಾವುದಾದರೂ ಪಕ್ಷದಿಂದ ಸ್ಪರ್ಧಿಸೋದಾದರೆ ನಾನು ಚುನಾವಣೆಗೆ ಸ್ಪರ್ಧಿಸೋದರಲ್ಲಿ ಅರ್ಥ ಏನಿದೆ... ಪಕ್ಷದ ಟಿಕೇಟ್ ಏನಿದ್ರೂ ಕೆ.ಆರ್. ಪೇಟೆ ಅಂಥವರಿಗೆ... ನಾವೇನಿದ್ರೂ ಇಂಡಿಪೆಂಡೆಂಟ್.

◆ **ಧಾರವಾಡದಿಂದಲೇ ಏಕೆ ಸ್ಪರ್ಧೆ?**

ಧಾರವಾಡ ನನ್ನ ಜಿಲ್ಲೆ ಕಣ್ರೆ. ನಾನು ಕಣ್ಣು ಬಿಟ್ಟ ಊರು, ಚಡ್ಡಿ ಸರಿಯಾಗಿ ಹಾಕ್ಕೋಳದನ್ನ ಕಲಿಸಿದ ಊರು, ಕನ್ನಡದ ಸೊಗಡನ್ನು ಮೊಗೆ ಮೊಗೆದು ಕೊಟ್ಟ ಊರು ಧಾರವಾಡ... ಅದೇ ಊರು ರಾಜಕೀಯದಲ್ಲೂ ಭವಿಷ್ಯ ಕಲ್ಪಿಸುತ್ತೆ, ನೋಡ್ತಿರಿ... ಧಾರವಾಡ ಪ್ರಜ್ಞಾವಂತರ ಊರು... ನನ್ನ ಕನಸಿನಲ್ಲಿ ಬರೋ ಬೇಂದ್ರೆಯಜ್ಜನ ಊರು... ಅಂಥ ಊರನ್ನು ಬಿಟ್ಟು ಬೇರೆಲ್ಲೂ ನಾನು ಎಲೆಕ್ಷನ್‌ಗೆ ನಿಲ್ಲೋದು ಸಾಧ್ಯವಿರಲಿಲ್ಲ. ಮಂಡ್ಯದಲ್ಲಿ ನಿಲ್ಲೋಣ ಅಂದ್ರೆ ಅಲ್ಲಿ ಅಣ್ತಮ್ಮನ ಜೊತೆ ಸುಮಲತಾಕ್ಕ ಇದ್ದಾರೆ. ಅವರೂ ಇಂಡಿಪೆಂಡೆಂಟೇ.

◆ **ನೀವು ಉಪ್ಪಿ ಅವರ ಪಕ್ಷದಿಂದ ಟಿಕೇಟ್ ನಿರೀಕ್ಷಿಸಿದ್ದಿರಿ, ಅವರು ಉಹುಂ ಅಂದ್ರು ಅನ್ನೋ ಮಾತಿದೆ...**

ನಿಮ್ಮ ಪ್ರಶ್ನೆಗೆ ನಾನು ಉಊಹುಂ, ಅವರದು ಪ್ರಜಾಕೀಯ, ನಮ್ಮದು ರಾಜಕೀಯ... ಆಗ್ಬರಲ್ಲ ಕಣ್ರೇ...